ಸತ್ಯವೇದ ಕಾಲೇಜು ಐ.ಎ.ಎಚ್.ಎಫ್

ಅಂತರಾಷ್ಟ್ರೀಯ ಮಾನವ ಏಳ್ಗೆ ವಿದ್ಯಾ ಸಂಸ್ಥೆ

# ದೇವರ ದ್ರಾಕ್ಷೇತೋಟ

ಎ.ಎಫ್.ಟಿ ಸಭೆಯ ದೈವಶಾಸ್ತ್ರ ಸಂಸ್ಥೆ ಚಂದಾಪುರ

- ಸಜ್ಜುಗೊಳಿಸುವುದು • ಶಿಕ್ಷಣ • ಅನುಭವ

ಜ್ಞಾನ ಮತ್ತು ದೇವರೊಂದಿಗಿನ ಸಂಬಂಧವನ್ನು ಸಂಯೋಜಿಸುವ ಮೂಲಕ ಕಲಿಯುವವರನ್ನು ಸಜ್ಜುಗೊಳಿಸಿ ಜೀವನದಲ್ಲಿ ದೇವರ ಉದ್ದೇಶವನ್ನು ಕಂಡುಹಿಡಿಯಲು ಶಕ್ತಿಗೊಳಿಸುವ ದೈವಶಾಸ್ತ್ರ ಸಂಸ್ಥೆಯಾಗಿದೆ.




ಯೆಹೋವನಲ್ಲಿಟ್ಟಿರುವ
ಭಯಭಕ್ತಿಯೇ
ಜ್ಞಾನದ ಮೂಲ

ಜ್ಞಾನೋಕ್ತಿ 1:7

## ದರ್ಶನ

ಭಾರತದ ತಲುಪಿಸಲ್ಪಡದ ಸ್ಥಳಗಳಿಗೆ ತಲುಪಿಸಲ್ಪಡುವುದೇ ನಮ್ಮ ದರ್ಶನವಾಗಿದೆ. ಅದರಲ್ಲಿ ನಿರ್ದಿಷ್ಟವಾಗಿ ಕರ್ನಾಟಕವಾಗಿದೆ. ವಿದ್ಯಾರ್ಥಿಗಳನ್ನು ಕ್ರೈಸ್ತನಾಯಕರಾಗಿ ಮತ್ತು ಸುವಾರ್ತೆ ಸಾರುವವರಾಗಿ ಶಿಕ್ಷಣ ಮತ್ತು ಸಬಲೀಕರಣಗೊಳಿಸುತ್ತೇವೆ.

## ಮಿಷನ್(ಸೇವೆ)

ನಮ್ಮ ಗುರಿ ವಿದ್ಯಾರ್ಥಿಗಳನ್ನು ಈ ಕೆಳಗಿನ 5 ರೀತಿಯ ಸೇವೆಗಳಲ್ಲಿ ತರಬೇತಿ ಮತ್ತು ಸಜ್ಜುಗೊಳಿಸುವುದಾಗಿದೆ.

**ಅಪೋಸ್ತಲರು, ಪ್ರವಾದಿಗಳು, ಸುವಾರ್ತಿಕರು, ಬೋಧಕರು, ಉಪದೇಶಕರು.**



ಫಾನ.ಬಿ.ರಮೇಶ್
ಸಂಸ್ಥಾಪಕರು

## ಚರಿತ್ರೆ

2004 ರಲ್ಲಿ ಒಬ್ಬ ಯೌವನಸ್ಥ ಆತನ ಹೆಸರು ರಮೇಶ್ ಬಾಬು. ಇವರು ದರ್ಶನ ಮತ್ತು ಆತ್ಮಭಾರದೊಂದಿಗೆ ಸಭೆಯನ್ನು ಸ್ಥಾಪಿಸಲು ಮುಂದಾಗಿ ಮತ್ತು ಯೇಸು ಕ್ರಿಸ್ತನ ಸುವಾರ್ತೆಯ ಮೂಲಕ ಜೀವಿತಗಳನ್ನು ರೂಪಾಂತರಗೊಳಿಸಲು ಬೆಂಗಳೂರಿಗೆ ಆಗಮಿಸಿದರು. ಮಡಿವಾಳದಲ್ಲಿ 2500 ರೂಪಾಯಿಗೆ ಒಂದು ಸ್ಥಳವನ್ನು ಬಾಡಿಗೆಗೆ ತೆಗೆದು ದೇವರ ಪ್ರೀತಿ ಮತ್ತು ಜೀವಿತದ ಉದ್ದೇಶವನ್ನು ಬಯಸುತ್ತಿದ್ದ ಹದಿನಾಲ್ಕು ಜನರಿಂದ ತಮ್ಮ ಸೇವೆಯನ್ನು ಪ್ರಾರಂಭಿಸಿದರು. ಜೂನ್ ತಿಂಗಳು 2012 ರ ಅವಧಿಗೆ ಬಹು ಸಂಖ್ಯೆಯಲ್ಲಿ ಜನರು ಹೆಚ್ಚಿದರು ಮತ್ತು ಸರ್ವಶಕ್ತನಾದ ದೇವರು ಫಾನ.ಬಿ.ರಮೇಶ್ ಬಾಬು ಅವರನ್ನು ಚಂದಾಪುರದಲ್ಲಿ ಒಂದು ಸ್ಥಳವನ್ನು ಖರೀದಿಸಲು ಹಾಗೂ ದೇವರನ್ನು ಆರಾಧಿಸಲೆಂದು ದೇವಾಲಯವನ್ನು ಕಟ್ಟಲು ಸಮರ್ಥಗೊಳಿಸಿದನು. ಪ್ರಸ್ತುತ ಪ್ರತಿ ಭಾನುವಾರ

ಬೆಳಗ್ಗೆ: ಕನ್ನಡ–ತಮಿಳು ಮತ್ತು ಆಂಗ್ಲ ಸಂಜೆ: ತಮಿಳು–ಕನ್ನಡ ಆರಾಧನೆಗಳು ಜಾರಿಯಲ್ಲಿದೆ.

ದೇವರು ಒಳ್ಳೆಯವನು ಎಂಬ ಅನುಭವದಲ್ಲಿ ಸಾವಿರಗಟ್ಟಲೆ ಜನರು ಆಶೀರ್ವಾದಿಸಲ್ಪಡುತಿದ್ದಾರೆ.
ಪ್ರತಿ ವಿದ್ಯಾರ್ಥಿ ಅಥವ ವಿದ್ಯಾರ್ಥಿನಿಯನ್ನು ದೇವರ ವಾಕ್ಯದ ಮೂಲಕ ತರಬೇತಿ ಮತ್ತು ಸಬಲೀಕರಣಗೊಳಿಸಿ ಕರ್ನಾಟಕ, ಭಾರತಾದ್ಯಂತ ಸಭೆಯನ್ನು ಸ್ಥಾಪಿಸಲು ಮುಂದಾಗುವುದೇ ಫಾನ.ಬಿ.ರಮೇಶ್‌ರವರ ದರ್ಶನವಾಗಿದೆ

## ಗುರಿ ಮತ್ತು ಉದ್ದೇಶ ಐ.ಎ.ಹೆಚ್.ಎಫ್ ಸತ್ಯವೇದಕಾಲೇಜು

- ಸುವಾರ್ತಿಕರು, ಬೋಧಕರು, ಉಪದೇಶಕರು ಮತ್ತು ಜೊತೆ ಕೆಲಸದವರಾಗಿ ಪ್ರಯೋಗಿಕ ಕ್ರೈಸ್ತ ಜೀವನ ನಡೆಸುವ ಶಿಕ್ಷಣವನ್ನು ಒದಗಿಸುತ್ತೇವೆ
- ಕ್ರೈಸ್ತ ಸೇವೆಗೆ ಸಿದ್ಧರಾಗಲು ದೇವರ ಕರೆಯನ್ನು ಗ್ರಹಿಸುವವರಿಗೆ ಸಭೆಯ ಮತ್ತು ಸಮಾಜದ ವಿಸ್ತರಣೆಯ ವ್ಯವಸ್ಥಿತ ದೈವಶಾಸ್ತ್ರದ ಶಿಕ್ಷಣವನ್ನು ಒದಗಿಸುತ್ತೇವೆ.
- ಸಮಗ್ರ ಪ್ರಜೆಯಾಗಿ ದೇಶದಲ್ಲಿ ಸೇವೆ ಮಾಡಲು ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸುತ್ತೇವೆ.

## ಶೈಕ್ಷಣಿಕ ಮಾಹಿತಿ

ಐ.ಎ.ಹೆಚ್.ಎಫ್– ಇದು ಒಂದು ದೈವಶಾಸ್ತ್ರ ಸಂಸ್ಥೆಯಾಗಿದೆ. ದೇವರನ್ನು ತಿಳಿಯುವ ತಿಳುವಳಿಕೆ ಮತ್ತು ದೇವರೊಂದಿಗೆ ಅವರಿಗಿರುವ ಸಂಭಂದವನ್ನು ಹೆಚ್ಚಿಸುವುದರೊಂದಿಗೆ ಅವರು ತಮ್ಮ ಜೀವನದಲ್ಲಿ ದೇವರ ಉದ್ದೇಶವನ್ನು ಕಂಡುಹಿಡಿಯುವುದರೊಂದಿಗೆ ಕ್ರಿಸ್ತನ ದೇಹ ಬೆಳೆಯಲು ಸಹಾಯ ಮಾಡುವುದರಲ್ಲಿ ಸಮರ್ಪಣೆಯುಳ್ಳದ್ದಾಗಿದೆ. ಡಿಪ್ಲೋಮ ಮತ್ತು ಪದವಿಮಟ್ಟದ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ಜಗತ್ತನ್ನು ಸುವಾರ್ತೆಯೊಂದಿಗೆ ತುಂಬಿಸುವುದೇ ನಮ್ಮ ಬಯಕೆಯಾಗಿದೆ. ಫನ.ಬಿ.ರಮೇಶ್ ಬಾಬು ರವರು ಉಜ್ಜೀವನದ ಸಂದೇಶಕರು ಮತ್ತು ಸಭೆಯ ಹಿರಿಯ ಬೋಧಕರಾಗಿದ್ದು ಐ.ಎ.ಹೆಚ್.ಎಫ್ ಸಂಸ್ಥೆಯನ್ನು ಬೆಂಗಳೂರಿನ ಚಂದಾಪುರದಲ್ಲಿ ಜೂನ್ ತಿಂಗಳು 2019 ರಲ್ಲಿ ಸ್ಥಾಪಿಸಿದರು. ವಿದ್ಯಾರ್ಥಿಗಳು ದೇವರ ವಾಕ್ಯದಿಂದ ತುಂಬಲ್ಪಟ್ಟು ಸಮಾನ ಮನಸ್ಸನ್ನು ರೂಪಿಸಿಕೊಳ್ಳುವುದರೊಂದಿಗೆ ಉತ್ತಮ ಗುಣಮಟ್ಟದ ಸಾಂಸ್ಕೃತಿಕ ಸಮಾಜವನ್ನು ಆನಂದಿಸುತ್ತಾರೆ.ಸತ್ಯವೇದ ಕಾಲೇಜು ದೈವಶಾಸ್ತ್ರದ ಜ್ಞಾನ ಮತ್ತು ಪ್ರಯೋಗಿಕ ಸೇವೆಯ ಅನುಭವವನ್ನು ಸಂಯೋಜಿಸಲು ಕೇಂದ್ರಿಕರಿಸುತ್ತದೆ, ಇದರೊಂದಿಗೆ ವಾರದ ಪ್ರಾರ್ಥನೆ ನಡೆ ಮತ್ತು ಸೇವೆಯ ಪ್ರಯಾಣಗಳನ್ನು ಒಳಗೊಂಡಿದೆ.

## ಐ.ಎ.ಹೆಚ್.ಎಫ್ ಸತ್ಯವೇದ ಕಾಲೇಜು ಕೊಡುಗೆ

- 2 ವರ್ಷ–ಡಿಪ್ಲೊಮೊ ವ್ಯಾಸಾಂಗ 10ನೇ ತರಗತಿ ಉತ್ತೀರ್ಣ
- 3 ವರ್ಷದ ಪದವಿ ವ್ಯಾಸಂಗ ದ್ವಿತೀಯ ಪಿ.ಯು.ಸಿ ಉತ್ತೀರ್ಣ

(ಎ.ಟಿ.ಎ ಅನುಮತಿಗೆ ನಿರೀಕ್ಷಿಸುತ್ತಿದೆ).

ಐ.ಎ.ಹೆಚ್.ಎಫ್ ಸತ್ಯವೇದ ಕಾಲೇಜು ವಿದ್ಯಾರ್ಥಿಗಳ ಮಾಧ್ಯಮ, ಆರಾಧನೆ, ಪ್ರತಿಭೆ, ನಾಯಕತ್ವ ಮುಂತಾದ ಸಂಭಂದಿತ ತರಬೇತಿಯ ಕಾರ್ಯಕ್ರಮಗಳೊಂದಿಗೆ ಅಂತಿಮ ಸೆಮಿಸ್ಟರ್ ದೈವಶಾಸ್ತ್ರದ ಉದ್ದೇಶವನ್ನು ಗುರುತಿಸಿ ಸಜ್ಜುಗೊಳಿಸಲು ಕೇಂದ್ರೀಕರಿಸುತ್ತದೆ.

ಶೈಕ್ಷಣಿಕ ವರ್ಷದಲ್ಲಿ ಎರಡು ಸೆಮಿಸ್ಟರ್ ಅಧ್ಯಾಯನವಾಗಿ ವಿಂಗಡಿಸಲಾಗಿದೆ. ಅದರಲ್ಲಿ ತಲಾ ಹದಿನಾರು ವಾರಗಳು ಒಳಗೊಂಡಿರುತ್ತದೆ.

| |
|---|
| **ಸೆಮಿಸ್ಟರ್ 1: ಜೂನ್ ಯಿಂದ ಅಕ್ಟೋಬರ್ ವರೆಗೆ** |
| **ಸೆಮಿಸ್ಟರ್ 2: ನವೆಂಬರ್ ಯಿಂದ ಏಪ್ರಿಲ್ ವರೆಗೆ** |

ಐ.ಎ.ಎಚ್.ಎಫ್ ಸತ್ಯವೇದ ಕಾಲೇಜು ಸ್ಥಳೀಯ ಮತ್ತು
ವಸತಿ ವಿದ್ಯಾರ್ಥಿಗಳನ್ನು ಹೊಂದಿರುತ್ತದೆ



## ವಿಷಯಗಳು

- ಸತ್ಯವೇದ ಸಮೀಕ್ಷೆ – ಹ.ಒ ಮತ್ತು ಹೊ.ಸ
- ವ್ಯವಸ್ಥಿತ ದೈವಶಾಸ್ತ್ರ
- ಸಭೆಯ ಚರಿತ್ರೆ
- ಆತ್ಮೀಕ ರಚನೆ
- ಹರ್ಮೆನ್ಯೂಟಿಕ್ಸ್ (ವ್ಯಾಖ್ಯಾನ ಶಾಸ್ತ್ರ)
- ಕ್ರೈಸ್ತಿಯ ಕರೆ ಮತ್ತು ವೃತ್ತಿ
- ಹೊಮೆಲಿಟಿಕ್ಸ್ (ಪ್ರಸಂಗ ಶಾಸ್ತ್ರ)
- ಕ್ರೈಸ್ತ ಧರ್ಮ ಸಮರ್ಥಕ
- ಸಂವಹನ
- ಪ್ರವಾದನ ಪುಸ್ತಕಗಳು– ಹ.ಒ
- ಅಪೋಸ್ತಲರ ಕೃತ್ಯ
- ಸಮಗ್ರ ಸೇವೆ
- ಮಾಧ್ಯಮ ಸಂವಹನ
- ಪಂಚಗ್ರಂಥ
- ಸಮಾನ ಸುವಾರ್ತೆಗಳು
- ಸಭಾಪಾಲಕರ ಅರೈಕೆ ಮತ್ತು ಸಮಾಲೋಚನೆ
- ಪ್ರಾಮುಖ ಧರ್ಮಗಳು
- ಸಂದರ್ಭಯೋಚಿತ ದೈವಶಾಸ್ತ್ರ
- ಕ್ರೈಸೀಯ ನೀತಿಶಾಸ್ತ್ರ
- ಸೇವಾ ಮತ್ತು ಸುವಾರ್ತಿಕರಣ
- ಜ್ಞಾನ ಸಾಹಿತ್ಯ
- ಭಾರತೀಯ ಸಭೆಯ ಚರಿತ್ರೆ
- ಪೌಲನ ಪತ್ರಿಕೆಗಳು
- ಎಸ್ಕಾಟಾಲಜಿ (ಅಂತ್ಯದಿನಗಳ ಶಾಸ್ತ್ರ)
- ಜಾಗತಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು
- ನಾಯಕತ್ವ ಮತ್ತು ನಿರ್ವಹಣೆ

## ನಿರ್ಭಂದವಲ್ಲದ ಶಿಕ್ಷಣಗಳು

- ವ್ಯಕ್ತಿತ್ವ ಬೆಳವಣಿಗೆಯೊಂದಿಗೆ ಮಾತನಾಡುವ ಇಂಗ್ಲೀಷ್
- ಕಂಪ್ಯೂಟರ್
- ಸಂಗೀತ ಶಿಕ್ಷಣ
- ಆರಾಧನೆಯ ಕಲೆಗಳು
- ಅಧ್ಯಾಯನ ವಿಧಾನಗಳು
- ಸೇವೆ–ಮಕ್ಕಳು/ಯೌವನಸ್ಥರು/ಪುರುಷರು/ಮಹಿಳೆಯರು.
- ಸಮಾಲೋಚನೆ







## ನಿರ್ಭಂದವಲ್ಲದ ಶಿಕ್ಷಣಗಳು

ಪುರುಷರಿಗಾಗಿ ವಸತಿ ನಿಲಯ, ಹಾಸಿಗೆ ಮತ್ತು ಮಂಚ, ಗುಣಮಟ್ಟದ ಬೀರುಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಒದಗಿಸಲಾಗಿದೆ. ಕೇಂದ್ರವಾಗಿ ಭೋಜನಾಲಯದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ಒದಗಿಸಲಾಗುತ್ತದೆ. ಹೆಚ್ಚುವರಿ ಸೌಲಭ್ಯಗಳಲ್ಲಿ ವಿಶಾಲವಾದ ದೇವಾಲಯ, ಕಛೇರಿ ಕೊಠಡಿಗಳು, ಅತಿಥಿ ಕೊಠಡಿ, ಹೊರಾಂಗಣ ಮತ್ತು ಆಟದ ಮೈದಾನ ಸೇರಿರುತ್ತವೆ.





ಪ್ರತಿ ದಿನ ಮುಂಜಾನೆ 5 ಗಂಟೆಗೆ ಪ್ರಾರ್ಥನೆಯೊಂದಿಗೆ ಮುಂದುವರಿಸಿ ವ್ಯಯಾಮ ಮತ್ತು ದೇವರೊಂದಿಗೆ ವೈಯುಕ್ತಿಕ ಸಮಯವನ್ನು ಕಳೆಯುವುದರೊಂದಿಗೆ ದೈನಂದಿನ ದಿನಚರಿ ಪ್ರಾರಂಭವಾಗುತ್ತದೆ. ಬೆಳಗ್ಗೆ 9 ರಿಂದ ಮಧ್ಯಾಹ್ನ 2 ರ ವರೆಗೆ ನಿಯಮಿತ ತರಗತಿಗಳಲ್ಲಿ ಚಾಪೆಲ್ ಮತ್ತು ಚಹಾ ವಿರಾಮ ಒಳಗೊಂಡಿರುತ್ತದೆ.

ವಿದ್ಯಾರ್ಥಿಗಳಿಗೆ ಗ್ರಂಥಾಲಯ, ಅಧ್ಯಾಯನದ ಸಮಯ, ಪಂದ್ಯಗಳು, ಕೆಲಸ ಕಾರ್ಯಗಳು –





## ಇತರ ಚಟುವಟಿಕೆಗಳು

ಐ.ಎ.ಎಚ್.ಎಫ್ ಸತ್ಯವೇದ ಕಾಲೇಜು ಪ್ರತಿಯೊಬ್ಬ ವಿದ್ಯಾರ್ಥಿಯ ಆಧ್ಯಾತ್ಮಿಕ ರಚನೆಗೆ ಅತೀ ಪ್ರಾಮುಖ್ಯತೆಯನ್ನು ನೀಡುತ್ತದೆ. ಇದು ನಿರಂತರವಾಗಿ ಬದಲಾಗುತ್ತಿರುವ ಈ ಜಗತ್ತಿನಲ್ಲಿ ವಿವಿಧ ಸವಾಲಿನ ಸಂದರ್ಭಗಳನ್ನು ಎದುರಿಸಲು ಅವರ ಸೇವೆಯಲ್ಲಿ ಬಹಳ ಸಹಾಯವಾಗುತ್ತದೆ. ನಮ್ಮ ಪ್ರಾರ್ಥನೆಯ ಮಂದಿರದಲ್ಲಿ (ಚಾಪೆಲ್) ಮತ್ತು ಹೊರಗಡೆ ಆರಾಧನೆ ನಡೆಸಲು, ಸಾಕ್ಷಿಯಾಗಲು ಮತ್ತು ಬೋಧಿಸಲು ಅವರಿಗೆ ಅವಕಾಶಗಳನ್ನು ನೀಡಲಾಗುತ್ತದೆ.

## ಗ್ರಂಥಾಲಯ

ಗ್ರಂಥಾಲಯವು ಕಾಲೇಜು ಜೀವನದ ಕೇಂದ್ರ ಭಾಗವಾಗಿದೆ. ಗ್ರಂಥಾಲಯದ ಗರಿಷ್ಠ ಬಳಕೆಗೆ ಅನುಕೂಲವಾಗುವಂತೆ ಉತ್ತಮ ಓದುವ ಅಭ್ಯಾಸವನ್ನು ಬೆಳೆಸಲು ವಿವಿಧ ಹಂತಗಳಲ್ಲಿ ವ್ಯಾಪಕವಾದ ಪುಸ್ತಕಗಳನ್ನು ಕಾರ್ಯಗತಗೊಳಿಸುವುದೇ ನಮ್ಮ ಬಯಕೆಯಾಗಿದೆ.





## ಕ್ರೀಡೆ

ವಿದ್ಯಾರ್ಥಿಗಳಲ್ಲಿ ಕ್ರೀಡೆಗಳಿಗೆ ಪ್ರಾಮುಖ್ಯತೆ ನೀಡಲಾಗುತ್ತದೆ. ವಿಶ್ರಾಂತಿ ಸಮಯ ಮತ್ತು ಚೈತನ್ಯಗೊಳ್ಳುವುದು ತಂಡಗಳಿಗೆ ಉತ್ಸಾಹವನ್ನು ಬೆಳೆಸಿ ಪ್ರೋತ್ಸಾಯಿಸುವಂತೆ ಮತ್ತು ಆರೋಗ್ಯಕರವಾದ ಸ್ಪರ್ಧೆ ನೀಡಲು ಕ್ರೀಡೆ ಸಹಾಯ ಮಾಡುತ್ತದೆ.









## ಮಿಷನ್(ಸೇವೆ)ಕೆಲಸ

ಮಿಷನ್ ಕಾರ್ಯಗಳಲ್ಲಿನ ಸವಾಲುಗಳನ್ನು ಅನ್ವೇಷಿಸಲು ಮತ್ತು ಪ್ರಾಯೋಗಿಕ ಜ್ಞಾನ ಹೊಂದಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸಲು ಮಿಷನ್ ಪ್ರವಾಸಗಳನ್ನು ನಿಯತಕಾಲಿಕವಾಗಿ ಆಯೋಜಿಸಲಾಗುತ್ತದೆ.









ಮೇಲಿನ ಚಿತ್ರಗಳು ಅಕ್ಟೋಬರ್ 2019ರಲ್ಲಿ ನಮ್ಮ ಒಡಿಶಾ ಪ್ರವಾಸದ ಸಮಯದಲ್ಲಿ ತೆಗೆದುಕೊಳ್ಳಲಾಗಿದೆ.

# ಅಧ್ಯಾಪಕರು

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ದೇವರನ್ನು ಅನುಭವಿಸಲು ಸರಿಯಾದ ಜ್ಞಾನವನ್ನು ಹೊಂದಲು ಐ.ಎ.ಹೆಚ್.ಎಫ್ ಸತ್ಯವೇದ ಕಾಲೇಜು ಶೈಕ್ಷಣಿಕ ಮತ್ತು ಆತ್ಮೀಕತೆಯನ್ನು ಸಂಯೋಜಿಸುವತ್ತ ಗಮನಹರಿಸುತ್ತದೆ. ಆದ್ದರಿಂದ ಕಲಿಯುವವರನ್ನು ಸಂಪಾದಿಸಲು ಅತ್ಯುತ್ತಮ ಅಧ್ಯಾಪಕರನ್ನು ಪ್ರಾರ್ಥನೆಯಿಂದ ನೇಮಿಸಲಾಗುತ್ತದೆ.

ಸರಿಯಾದ ದೈವಶಾಸ್ತ್ರ – ಸರಿಯಾದ ಜೀವಿತ

**ಡಾ.ರೇಣುಕಾ ಜಯಕುಮಾರ್**
**Ph. D.**



ಪ್ರಾಂಶುಪಾಲರು

**ಬೋಧಕರು.ಅನ್ಬುಂ**
**M.Th**



ಅಧ್ಯಾಪಕರು

**ಬೋಧಕರು. ಅನ್ಬುಂರಾಜ್**
**M.Div**



ಅಧ್ಯಾಪಕರು

**ಬೋಧಕರು.ಶ್ರೀಧರ್**
**M.Div**



ಅಧ್ಯಾಪಕರು

**ಬೋಧಕರು.ವಿನ್ಸೆಂಟ್ ರಾಜ್**
**B.Com, D.Th**



ಅಧ್ಯಾಪಕರು

**ಮಾನ್ಯ ಗೋಪಿನಾಥ್**



ಗ್ರಂಥನಿರ್ವಾಹಕರು

## IAHF - BIBLE COLLOGE
## INTERNATIONAL ACADEMY FOR HUMAN FLOURISHING

| ಶಿಕ್ಷಣ ಕೊಡುಗೆ | ಅರ್ಹತೆ | ಅವಧಿ | ಮಾಧ್ಯಮ |
|---|---|---|---|
| ಬ್ಯಾಚುಲರ್ ಆಫ್ ಥಿಯಾಲೊಜಿ | ದ್ವಿತೀಯ ಪಿಯುಸಿ ಉತ್ತೀರ್ಣ | 3 | ಕನ್ನಡ, ಆಂಗ್ಲ, ತಮಿಳು |

| ಶಿಕ್ಷಣ ಕೊಡುಗೆ | ಅರ್ಹತೆ | ಅವಧಿ | ಮಾಧ್ಯಮ |
|---|---|---|---|
| ಡಿಪ್ಲೊಮ ಇನ್ ಥಿಯಾಲೊಜಿ | 10 ನೇ ತರಗತಿ ಉತ್ತೀರ್ಣ | 2 | ಕನ್ನಡ, ಆಂಗ್ಲ, ತಮಿಳು |

**APPLY ONLINE: www.revramesh.org**








EMAIL: **iahfbiblecollege2019@gmail.com**

PHONE NOS: **9945215235** or **9972427152**


AFT

# ಎ.ಎಫ್.ಟಿ ಸಭೆ


#139, ಯಲ್ಲಮ್ಮನಗರ, ಹೆನ್ನಾಗರ ಗೇಟ್, ಚಂದಾಪುರ, ಬೊಮ್ಮಸಂದ್ರ(ಪೊ),
ಆನೇಕಲ್(ತಾ), ಬೆಂಗಳೂರು 560–099. ಕರ್ನಾಟಕ – ಭಾರತ.